ಸಾಕ್ಷಿಯನ್ನು ದಿಃ **13.11.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಯರ ಪರ ಶ್ರೀಮತಿ ಎಸ್ ಎ ವಕೀಲರಿಂದಃ-**

ನನ್ನ ತಂದೆ ತಾಯಿಗೆ ನಾವು 4 ಜನ ಮಕ್ಕಳು. ನಾನು ಒಬ್ಬಳೇ ಮಗಳು. ಮೂರು ಜನ ಗಂಡು ಮಕ್ಕಳು. ನನ್ನ ಮದುವೆಯಾಗಿ 24 ವರ್ಷಗಳಾಯಿತು. ಮದುವೆಯ ಸಮಯದಲ್ಲಿಯೇ ನನಗೆ ಸೇರಬೇಕಾದ ಎಲ್ಲಾ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಯಲ್ಲಿ 300 ಗ್ರಾಂ ಚಿನ್ನ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು 1 ನೇ ಪ್ರತಿವಾದಿಯ ಜೊತೆ ಮಾತನಾಡಿದ್ದೇನೆ. ದಾವಾ ಐಟಂ ನಂಬರ್ 2 ನ್ನು ನನ್ನ ತಂದೆ ಮಾದೇಗೌಡ ಎಂಬುವವರಿಂದ ಸ್ವಯಾರ್ಜಿತವಾಗಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯಾಗಿದೆ. ದಾವಾ ಐಟಂ ನಂಬರ್ 2 ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಆರ್ ಆರ್ ನಕಲು ಹಾಗೂ ಕಂದಾಯ ಪಾವತಿ ರಶೀದಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಐಟಂ ನಂಬರ್ 2 ನ್ನು ನಂತರ ನನ್ನ ತಂದೆ ಮಾದೇಗೌಡ ಎಂಬುವವರಿಗೆ ಮಾರಾಟ ಮಾಡಿ ಮಾದೇಗೌಡರವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಪುನಃ ಖರೀದಿಸಿದ್ದಾರೆ. ಮಾದೇಗೌಡರವರು ದಾವಾ ಐಟಂ ನಂಬರ್ 2 ರ ಸ್ವಾಧೀನದಲ್ಲಿ ಇರಲಿಲ್ಲ. ಮಾದೇಗೌಡರವರು ಕೇವಲ ಕ್ರಯ ಪತ್ರವನ್ನು ಬರೆಸಿಕೊಂಡು ಸ್ವಾಧೀನವನ್ನು ಪಡೆದಿರಲಿಲ್ಲ. ನನ್ನ ತಂದೆ ನಂತರ ದಾವಾ ಐಟಂ ನಂಬರ್ 2 ನ್ನು ಡಾಕ್ಟರ್ ಚಂದ್ರಶೇಖರ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ದಾವೆ ಸಲ್ಲಿಸುವ ಸಲುವಾಗಿ ಪಹಣಿಯನ್ನು ತೆಗೆದಾಗ ದಾವಾ ಐಟಂ ನಂಬರ್ 2, 5 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ದಾವಾ ಐಟಂ ನಂಬರ್ 2 ಮೊದಲು ಮಾದೇಗೌಡ, ನಂತರ ಡಾ ಚಂದ್ರಶೇಖರ ಅವರ ನಂತರ 5 ನೇ ಪ್ರತಿವಾದಿಯ ಹೆಸರಿಗೆ ಬಂತು ಎಂದರೆ ನಾನು ಪಹಣಿಗಳನ್ನು ತೆಗೆದಾಗ ಗೊತ್ತಾಯಿತು. ಈ ದಾವೆ ಸಲ್ಲಿಸಿದ ನಂತರ ನಾನು ನನ್ನ ಊರಿಗೆ ಹೋಗಿಲ್ಲ. ನನ್ನ ತಾಯಿಯನ್ನು ಮಾತನಾಡಿಸಲು ಕೂಡ ಹೋಗಿಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ನನ್ನ

ತವರು ಮನೆಗೆ ತಿಂಗಳು ಎರಡು ತಿಂಗಳಿಗೊಮ್ಮೆ ಹೋಗುತ್ತಿದ್ದೆ. ನನ್ನ ತಂದೆ ಅದೇ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ. ಎಲ್ಲಾ ದಾವಾ ಸ್ವತ್ತುಗಳು ಒಂದೇ ಚೆಕ್ಕುಬಂದಿಯೊಳಗಿದೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ನನ್ನ ತಂದೆ ಮತ್ತು ಸಹೋದರರು ಉಳುಮೆ ಮಾಡುತ್ತಿದ್ದಾರೆ. ಉಳುಮೆ ಮಾಡುವ ಸಲುವಾಗಿ ದಾವಾ ಸ್ವತ್ತುಗಳನ್ನು ಬೇರೆಯವರಿಗೆ ಭೋಗ್ಯಕ್ಕೆ ಕೊಟ್ಟಿಲ್ಲ. ನಾನು ತಂದೆ ಮನೆಗೆ ಹೋದಾಗಲೆಲ್ಲ ದಾವಾ ಸ್ವತ್ತುಗಳನ್ನು ನೋಡಿಕೊಂಡು ಓಡಾಡಿ ಬರುತ್ತಿದ್ದೆ ಎಂದರೆ ಸರಿ. ನಾನು ಊರಿಗೆ ಹೋದಾಗ ದಾವಾ ಸ್ವತ್ತುಗಳನ್ನು ಮಾದೇಗೌಡರವರಾಗಲೀ, ಚಂದ್ರಶೇಖರ ಕಡೆಯವರಾಗಲೀ ಉಳುಮೆ ಮಾಡುವುದನ್ನು ನಾನು ಕಂಡಿಲ್ಲ.

ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನನ್ನ ತಾಯಿಯು ದಾವೆ ಹಾಕುವುದು ಬೇಡ ನನ್ನ ಹೆಸರಿನಲ್ಲಿಯೂ ಜಮೀನಿದೆ ನಿನಗೆ ಕೊಡಬೇಕಾಗಿದ್ದನ್ನು ಕೊಡುತ್ತೇನೆಂದು ನನ್ನನ್ನು ಒಪ್ಪಿಸಿದರು ಎಂದರೆ ಸರಿ. ನನ್ನ ತಂದೆ ನನ್ನನ್ನು ಕೂರಿಸಿಕೊಂಡು ಡಾ ಚಂದ್ರಶೇಖರವರಿಗೆ ಆದಾಯ ತೆರಿಗೆಯನ್ನು ತಪ್ಪಿಸುವ ಸಲುವಾಗಿ ಮಾತ್ರ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದು ಸ್ವಾಧೀನ ಬಿಟ್ಟುಕೊಟ್ಟಿಲ್ಲ, ಅವರಿಂದ ಪುನಃ ದಾಖಲೆಯನ್ನು ಬರೆಸಿಕೊಂಡು ನಂತರ ಎಲ್ಲರಿಗೂ ಭಾಗ ಮಾಡಿಕೊಡುತ್ತೇನೆ ಎಂದು ನನ್ನ ತಂದೆ ಹೇಳಿದ್ದರು ಎಂದರೆ ಸರಿ.

3 ನೇ ಪ್ರತಿವಾದಿ ನಮ್ಮ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. 4 ನೇ ಪ್ರತಿವಾದಿ ಅವರ ಅತ್ತೆಯ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಚಂದ್ರಶೇಖರವರಿಂದ ತಂದೆ ಜಮೀನನ್ನು ವಾಪಸ್ಸು ಬರೆಸಿಕೊಳ್ಳುತ್ತಾರೆ, ಆ ನಂತರ ನಿನಗೆ ಹಿಸ್ಸೆ ಕೊಡಿಸುತ್ತೇನೆ ಎಂದು ನನಗೆ ಭರವಸೆ ನೀಡಿ ಒಪ್ಪಿಸಿದ್ದರು ಎಂದರೆ ಸರಿ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಕೂಡ ಎಲ್ಲರ ಮಾತನ್ನು ತಿರಸ್ಕರಿಸಿ ನನ್ನ ಗಂಡನ ಮಾತನ್ನು ಕೇಳಿ ಈ ದಾವೆ ಹಾಕಿದ್ದೇನೆ ಎಂದರೆ ಸರಿ. ಈ ದಾವೆಯನ್ನು ರಾಜಿ ಮಾಡಿಕೊಳ್ಳಲು ತೊಂದರೆಯಿದೆಯೇ ಎಂದರೆ ರಾಜಿ ಮಾಡಿಕೊಳ್ಳುವುದಿಲ್ಲ. ನಾನು ಎಲ್ಲರ ಮಾತನ್ನು ತಿರಸ್ಕರಿಸಿ ಹಠ ಮಾಡಿ

ನನ್ನ ಗಂಡನ ಮಾತನ್ನು ಕೇಳಿ ನನ್ನ ತಂದೆ ತಾಯಿಗೆ ಮತ್ತು ಸಹೋದರರಿಗೆ ತೊಂದರೆ ಕೊಡಬೇಕೆಂದು ಉದ್ದೇಶಪೂರ್ವಕವಾಗಿ ಈ ದಾವೆ ಹಾಕಿದ್ದೇನೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.